

'ಇಗೋ ಕಣೆ ಇನ್ನೇನೋ ಅಲ್ಲ! ಗಂಡ್ಸು ಅನ್ನೋ ಇಗೋ. ಬ... ಮಗಂದು ಬ್ಲಡ್ಡಲ್ಲೇ ಬಂದಿರತ್ತೆ ಇವ್ರಿಗೆಲ್ಲ!' ವಸು ಹಲ್ಲು ಕಡಿಯುತ್ತ ಎಕ್ಸೈಟ್ ಆಗಿದ್ದಳು. 'ಕೂಲ್ ವಸು...! ಯಾಕ್ ಇಷ್ಟ್ ಎಗ್ಸೈಟ್ ಆಗ್ತೀಯಾ?' ಎಂದು ಭುಜ ಮುಟ್ಟಿದರೆ ಹಾವು ಕಚ್ಚಿದಂತೆ ಸರಿದು ನನ್ ಕೈ ಕೊಡವಿದಳು.

'ನೀನ್ ಸುಮ್ನಿರು ಮಾನ್ಸಿ, ನಿಂಗೆ ನಾನ್ ಹೇಳಿದ್ ಅರ್ಥ ಆಗ್ಲಿಲ್ಲ. ಗಂಡ್ಸು ಯಾವತ್ತಿದ್ರೂ ಗಂಡ್ಸೆ. ಶುದ್ಧ ಸ್ವಾರ್ಥಿ. ತೆವಲು ತೀರಿದ್ಮೇಲೆ ಅಷ್ಟಿಗ್ ಹೆಂಡ್ತಿ ಕಷ್ಟ ಕೇಳೋಕ್ ಟೈಮ್ ಎಲ್ಲಿರತ್ತೆ ಹೇಳು? ನೀನೇ ಯೋಚ್ಸು, ಮೊದ್ಲೆಲ್ಲ ನೀನೂ ಕೆಲ್ಸಕ್ ಹೋಗ್ತಿದ್ದೆ. ಅವ್ನೂ ಹೋಗ್ತಾನೆ. ಆದ್ರೆ ತಿಂಡಿ ಮಾಡೋದ್ ಯಾರು? ನೀನ್ ಎದ್ದು ಅಡುಗೆ ಮನೆಯ ಕೆಲ್ಸ ಮುಗ್ಸೋ ಹೊತ್ತಿಗ್ ಅವ್ನು ಆಕಳಿಸ್ತಾ ಏಳ್ತಾನೆ. ಅವ್ನು ರೆಡಿ ಆಗಿ ಪರ್ಫ್ಯೂಮ್ ಹಾಕಿ ಬರ್ತಿದ್ ಹಾಗೇ ಟೇಬಲ್ ಮೇಲೆ ಬಿಸಿ ಬಿಸಿ ತಿಂಡಿ ರೆಡಿ ಇರ್ಬೇಕು! ತಿಂಡಿ ತಿನ್ನುವಾಗ್ಲಾದ್ರೂ ನಾಲ್ಕ್ ಮೆಚ್ಚುಗೆ ಮಾತಾಡ್ತಾನಾ? ಅವಲಕ್ಕಿಗ್ ಖಾರ ಕಮ್ಮಿ, ದೋಸೆ ಹಿಟ್ ಹುಳಿ ಬಂದಿಲ್ಲ, ಉಪ್ಪಿಟ್ಟಿಗ್ ಉಪ್ ಜಾಸ್ತಿ... ಆಹಾ, ಶುರುವಾಗ್ಬಿಡತ್ತೆ ವಿಮರ್ಶೆ! ಬೇಗ ಎದ್ದು ಮಾಡಿದಾಳೆ ಅನ್ನೋ ಕೃತಜ್ಞತೆ ಇಲ್ಲ... ಥ್ಯಾಂಕ್‌ಲೆಸ್ ಜನಗಳು!' ಟೇಬಲ್ ಮೇಲೆ ಆಗಷ್ಟೇ ವೇಟರ್ ತಂದಿಟ್ಟ ಐಸ್ ಕ್ರೀಂ ಬಾಯೊಳಗೆ ಹೋದರೂ ವಸು ಮನಸ್ಸೇನೂ ತಂಪಾದಂತೆ ಅನ್ನಿಸಲಿಲ್ಲ!

ನಾನು ಏನೊಂದೂ ಮಾತನಾಡದೆ ಅವಳನ್ನೇ ನೋಡುತ್ತ ಕೂತಿದ್ದೆ. ಅವಳು ಹೀಗೆ ಮಾತನಾಡೋದು, ನಾನು ಸುಮ್ಮನೇ ಕೂರೋದು ಯಾವುದೂ ಹೊಸತಲ್ಲ. ಮದುವೆಯಾಗಿ ಐದು ವರ್ಷವಾದರೂ ಪ್ರತಿದಿನ ಗಂಡನ್ನ ದೂರೋದು ನಿಂತಿಲ್ಲ. 'ಹೋಗ್ಲಿ ಇಷ್ಟೆಲ್ಲ ವೈಮನಸ್ಯ ಇಟ್ಕೊಂಡು ಯಾಕ್ ಒಟ್ಟಿಗೆ ಇರ್ತೀರಾ? ಬೇರೆ ಆದ್ರೇ ನೆಮ್ಮದಿಯಿಂದ ಇರ್ತೀರಾ ಅಂದ್ರೆ ಅದೇ ಸರಿ ಅಲ್ವಾ? ನೆಮ್ಮದಿ ಮುಖ್ಯ ಕಣೇ...' ಎಂದು ಯಾವತ್ತೋ ಒಂದಿನ ತಡೀಲಾರದೆ ಹೇಳಿದ್ದೆ.

'ಇಲ್ವೇ... ನಾನ್ ಬೇರೆ ಹೋದ್ರೆ ಅವ್ನು ಬೇರೆ ಯಾವ್ಳನ್ನೋ ಕಟ್ಕೊಂಡ್, ಅವ್ಳನ್ನೂ ನನ್ ಥರಾನೇ ಟ್ರೀಟ್ ಮಾಡ್ಕೊಂಡ್ ಹಾಯಾಗ್ ಇರ್ತಾನೆ. ಸೋಲೋದ್ಯಾರು? ನಾನು! ಅವ್ನ ಕಟ್ಕೊಳೋಳು ಟಿಪಿಕಲ್ ಇಂಡಿಯನ್ ವುಮನ್ ಆಗಿದ್ರೆ ಮುಗೀತು. ಗಂಡ ಹೇಳಿದ್ದೇ ವೇದವಾಕ್ಯ, ತನ್ ಜೀವ್ನ ಇರೋದೆ ಅವ್ನ್ ಸೇವೆ ಮಾಡೋಕೆ ಅಂದ್ಕೊಂಡ್ ಇರ್ತಾಳೆ... ಪೂರ್ ವುಮೆನ್...! ನಂಗ್ ನೆಮ್ಮದಿ ಇಲ್ಲ ಅಂದ್ರೂ ಪರ್ವಾಗಿಲ್ಲ, ಅವ್ನಿಗ್ ನೆಮ್ಮದಿ ಸಿಗ್ಬಾರ್ದು!' ಎಂದು ಮತ್ತೆ ಹಲ್ಲು ಕಡಿದಿದ್ದಳು.

'ಇಂಥ ಸ್ಯಾಡಿಸ್ಟ್ ಹೆಣ್ಣನ್ನ ಅದ್ ಹೇಗ್ ನಾನ್ ಫ್ರೆಂಡ್ ಮಾಡ್ಕೊಂಡೆ? ಇಂಥೋಳ್ ಫ್ರೆಂಡ್ಶಿಪ್ ನಿಜವಾಗ್ಲೂ ಬೇಕಾ?' ಇದು ನಂಗೇ ನಾನು ಸಾವಿರದ ಮೂರೂ ನೂರಾ ಒಂದನೇ ಬಾರಿ ಕೇಳಿಕೊಳ್ತಾ ಇರೋ ಪ್ರಶ್ನೆ! ಅಷ್ಟಕ್ಕೂ ನಾನ್ಯಾಕೆ ವಸುನಾ ದೂರ ಮಾಡ್ಕೊಳೋಕ್ ಮನ್ಸು ಮಾಡ್ತಿಲ್ಲ? ಅವಿನಾ, ನನ್ನ ಒಂದ್ ಮಾಡ್ದೋಳು ಅನ್ನೋ ಕಾರಣಕ್ಕಾ? ಜಾತಿ ಬೇರೆ ಅಂತ ಇಡಿ ಫ್ಯಾಮಿಲಿ ಎದುರು ನಿಂತಾಗ ನಮ್ ಪರವಾಗಿ ಹೋರಾಟ ಮಾಡಿರೋಳು ಅಂತಾನಾ? ಅಥವಾ ಅಳುಮುಂಜಿ ಆಗಿದ್ದ ನನ್ನ ಅಲ್ಪಸ್ವಲ್ಪಾನಾದ್ರೂ ಬೋಲ್ಡ್ ಮಾಡಿದಾಳೆ ಅನ್ನೋ ಕಾರಣಕ್ಕಾ? ಅಥವಾ ಈ ಎಲ್ಲಾ ಕಾರಣಕ್ಕೂನಾ?

ಅವಳ ವೈಯಕ್ತಿಕ ಬದುಕು ಏನೇ ಆಗ್ಲಿ, ನನ್ ಲೈಫ್‌ನಲ್ಲಿ ಅವ್ಳು ಒಳಿತನ್ನೇ ಮಾಡಿದಾಳೆ ಅನ್ನೋ ಕಾರಣಕ್ಕೆ ಎಲ್ಲೋ ಒಂದ್ ಕಡೆ ಅವ್ಳ ಮೇಲೆ ಸುಪ್ತವಾದ ಗೌರವ ಇರೋದ್ ಸತ್ಯ. ಆದ್ರೆ ಇತ್ತೀಚೆಗೆ ನನ್ನ, ಅವಿ ಮಧ್ಯೆಯೇ ತಂದ್ ಇಡೋಕ್ ನೋಡ್ತಿದಾಳಾ ಇವ್ಳು ಅನ್ನೋ ಅನುಮಾನ ನನ್ನ ತುಂಬಾ ಸಾರಿ ಕಾಡತ್ತೆ. ಆಗೆಲ್ಲ ಹೇಗಾದ್ರು ಮಾಡಿ ಇವ್ಳಿಂದ ದೂರ ಆಗ್ಬೇಕು ಅಂತ ಮನ್ಸು ಒದ್ದಾಡಿದೆ! ಆದ್ರೆ ಹೇಗೆ...? ಎಂದುಕೊಂಡು ಕೊನೆಯ ಬೈಟ್ ಐಸ್ ಕ್ರೀಮ್ ಅನ್ನು ಬಾಯಿಗಿಡುವಾಗ ರೆಸ್ಟ್ ರೂಮ್‌ಗೆ ಹೋಗಿದ್ದ ವಸು ಎದುರಲ್ಲಿ ಬಂದು ನಿಂತಳು.

'ಆಯ್ತಾ ಮೇಡಂ? ಒಂದ್ ಕಪ್ ಐಸ್ ಕ್ರೀಮ್‌ನ ಇಷ್ಟೆಲ್ಲ ಆಸ್ವಾದಿಸಿ ತಿಂತೀಯಲ್ಲ, ಭೇಷ್ ಕಣೆ...' ಎಂದು ಬಿಲ್ ಇಟ್ಟಳು. ಅದೇನು ಹೊಗಳಿಕೆನಾ, ತೆಗಳಿಕೆನಾ, ವ್ಯಂಗ್ಯಾನಾ ತಿಳೀಲಿಲ್ಲ. ಅವಳ ಎಷ್ಟೋ ಮಾತಲ್ಲಿ ಯಾವ ಭಾವವಿದೆ ಅಂತ ಹುಡುಕೋ ಯತ್ನಾನೇ ಬಿಟ್ಟಿದೀನಿ.

'ಹೊರ್ಡೋಣ್ವಾ?' ಎಂದೆ ವ್ಯಾನಿಟಿ ಬ್ಯಾಗ್ ಹೆಗಲಿಗೇರಿಸುತ್ತ.

'ಯಾಕೆ? ಯಜಮಾನ್ರು ಬರೋಕ್ ಮೊದ್ಲೇ ಮನೆ ಸೇರ್ಕೊಳ್ಳಲಿಲ್ಲ ಅಂದ್ರೆ ಇಂಟರಾಗೇಶನ್ ನಡ್ಯುತ್ತಾ?' ಎಂದು ನಕ್ಕಳು.

'ಅವಿಗ್ ನನ್ಮೇಲ್ ನಂಬ್ಕೆ ಇದೆ ಕಣೆ. ಅವ್ನ್ ಏನೂ ಕೇಳಲ್ಲ' ಸ್ವಲ್ಪ ಕಟುವಾಗೇ ಹೇಳ್ದೆ.

'ಹೊಸತರಲ್ಲಿ ಅಗಸ ಬಟ್ಟೆನಾ ಎತ್ತಿ ಎತ್ತಿ ಒಗ್ದಿದ್ನಂತೆ' ವಸು ಗೊಣಗಿದಳು.

'ನಮ್ ಮದ್ವೆ ಆಗಿ ಮೂರ್ ವರ್ಷ ಆಯ್ತು. ಹೊಸತೇನಲ್ಲ' ಅಂದೆ.

'ಕುಂಬಳ್ ಕಾಯಿ ಕಳ್ಳ ಹೆಗಲು ಮುಟ್ಟಿ ನೋಡ್ಕೊಂಡ್ನಂತೆ' ಎಂದು ನಕ್ಕಳು.

'ಕಮಾನ್ ವಸು, ಯಾಕ್ ವ್ಯಂಗ್ಯ ಮಾಡ್ತೀಯಾ? ಒಂದ್ ಮಾತ್ ಹೇಳ್ತೀನಿ ನೆನಪಿಟ್ಕೊ. ಎಲ್ಲಾ ಗಂಡಸ್ರೂ ಒಂದೇ ಥರ ಇರಲ್ಲ. ಮ್ಯೂಚುವಲ್ ಅಂಡರ್ಸ್ಟಾಂಡಿಂಗ್ ಇದ್ರೆ ದಾಂಪತ್ಯ ಚೆನ್ನಾಗಿರತ್ತೆ' ಸ್ವಲ್ಪ ಜೋರುದನಿಲೇ ಹೇಳಿದ್ದೆ.

'ಇದನ್ನೇ, ಇದನ್ನೇ ಹೇಳೋದು ಟಿಪಿಕಲ್ ಇಂಡಿಯನ್ ವುಮನ್ ಮೆಂಟಾಲಿಟಿ ಅಂತ. ನೀನ್ ಮಾಡಿರೋ ಅಡುಗೆ ಹೊಗಳ್ಕೊಂಡು, ನಿನ್ ಅಂದಚೆಂದ ವರ್ಣಿಸ್ಕೊಂಡು ನಿನ್ನ ಸೇವಕಿ ಥರ ದುಡಸ್ಕೊತಾ ಇದ್ರೂ ನಿಂಗ್ ಏನೂ ಅನ್ಸಲ್ಲ ಅಲ್ವಾ? ಆ ಮನುಷ್ಯನ ಬಾಯಲ್ ಬರೋ ನಾಲ್ಕು ಹೊಗಳಿಕೆ ಮಾತಿಗಾಗಿ ಎಷ್ಟ್ ಹಾತೊರಿತೀರೋ ನೀವೆಲ್ಲ! ಛೆ... ಅದ್ ಪ್ರೀತಿ ಅಲ್ವೆ, ನಿನ್ ಗಂಡ ನಿನ್ನ ಇಂಡೈರೆಕ್ಟ್ ಆಗಿ ರೂಲ್ ಮಾಡ್ತಿದಾನೆ, ಟ್ರೈ ಟು ಅಂಡರ್‌ಸ್ಟ್ಯಾಂಡ್...'

'ವಸು, ಇನಫ್... ನೋಡು, ನಿನ್ ಲೈಫ್ ಬೇರೆ, ನನ್ ಲೈಫ್ ಬೇರೆ.... ನೀನ್ಯಾಕ್ ನಿನ್ ಸಮಸ್ಯೆನಾ ಜನರಲೈಸ್ ಮಾಡ್ತಿದಿಯಾ?' ಎಂಬ ನನ್ನ ಮಾತನ್ನು ಅರ್ಧಕ್ಕೆ ತಡೆದ ವಸು ನನ್ನ ಕಣ್ಣನ್ನೇ ನೋಡುತ್ತ ಮಾತಿಗಿಳಿದಳು.

'ನನ್ ಗಂಡ ತುಂಬಾ ಪ್ರಾಮಾಣಿಕ ಅಂತ ನೀವೆಲ್ಲ ಅಂದ್ಕೊತೀರಲ್ಲ, ಅಲ್ಲೇ, ಅಲ್ಲೇ ಅವ್ರು ನಿಮ್ಮನ್ ನಂಬ್ಸಿ ಮೋಸ ಮಾಡೋದು, ನಯವಂಚಕರು. ಎಷ್ಟೋ ಫೋನ್ ಕಾಲ್ ಬಂದಾಗ ನಿನ್ ಗಂಡ ಬಾಲ್ಕನಿಗ್ ಹೋಗಿ ಮಾತಾಡ್ತಾನಲ್ಲ, ಯಾಕೆ ಅಂತ ಗೊತ್ತಾ? ನಿನ್ ಗಂಡನ್ ಕಾಲ್ ಲಿಸ್ಟ್ ಒಂದ್ಸಾರಿನಾದ್ರೂ ಚೆಕ್ ಮಾಡಿದೀಯಾ? ಅವ್ನು ನಿನ್ ಜೊತೆ ಟೈಮ್ ಕೊಡದೆ ಫೋನ್ ಹಿಡ್ಕೊಂಡ್ ಮೆಸೇಜ್ ಮಾಡ್ತಿರ್ತಾನಲ್ಲ, ಯಾರಿಗ್ ಮೆಸೇಜ್ ಮಾಡ್ಕೊಂಡ್ ಕಿಸಿತಾನೆ ಅಂತ ನೋಡಿದೀಯಾ? ಆಫೀಸಿಂದ ತಡವಾಗಿ ಬಂದು ಕೆಲ್ಸ ಇತ್ತು ಅಂತಾನಲ್ಲ, ಯಾರ್ ಜೊತೆ ಸುತ್ತಾಡೋಕ್ ಹೋಗಿದ್ದ ಅಂತ ತಿಳ್ಕೊಂಡಿದೀಯಾ? ಮದ್ವೆಗ್ ಮುಂಚೆ ನಿನ್ ಗಂಡ ನಿಂಜೊತೆ ಹೇಗಿದ್ದ? ಈಗ್ ಹೇಗಿದಾನೆ? ಒಂದ್ಸಾರಿ ಕಂಪೇರ್ ಮಾಡು, ಸತ್ಯ ಗೊತ್ತಾಗತ್ತೆ' ಎಂದು ಬಾಯ್ ಕೂಡ ಹೇಳದೆ ಬಿರಬಿರನೆ ನಡೆದು ಹೋದಳು. ನಾನೂ ಕರೆಯಲಿಲ್ಲ!

***

ಬಿಸಿಲು ನೆತ್ತಿಗೇರಿತ್ತು. ಟೂ ವೀಲರ್‌ನಲ್ಲಿ ಮನೆಗೆ ಹೋಗುತ್ತಿದ್ದರೆ ತಲೆಯಲ್ಲಿ ವಸು ಹೇಳಿದ ಮಾತುಗಳೇ ಗಿರಿಗಿಟ್ಲೆ ಹೊಡೆಯುತ್ತಿತ್ತು.

'ಹೌದು, ಒಂದ್ಸಾರಿನಾದ್ರೂ ನಾನು ಅವಿ ಫೋನ್ ತಗೊಂಡು ನೋಡಿದೀನಾ? ಅವ್ನು ಬಾಲ್ಕನಿಗೆ ಹೋಗಿ ಮಾತನಾಡಿ ಬಂದು, ಆಫೀಸ್ನಿಂದ ಫೋನ್ ಅಂದಾಗ ಕ್ರಾಸ್ ಚೆಕ್ ಮಾಡಿದೀನಾ? ವಸು ಹೇಳಿದ್ದೆಲ್ಲ ಸತ್ಯ ಅಲ್ಲ, ಆದ್ರೆ ಎಲ್ಲಾನೂ ಸುಳ್ಳು ಅಲ್ಲ ಅಲ್ವಾ?' ಯಾಕೋ ಮನ್ಸು ಸ್ಥಿಮಿತ ಕಳೆದುಕೊಂಡಿತ್ತು.

ಮನೆಗೆ ಬಂದವಳೇ ಎರಡು ಬಾಳೆಹಣ್ಣು ತಿಂದು ಮಲಗಿದೆ. ಯಾಕೋ ತಲೆ ಸಿಡೀತಾ ಇತ್ತು. ಅವಿ ಎರಡು ಬಾರಿ ಫೋನ್ ಮಾಡಿದ್ದ. 'ನಾನೆಲ್ಲೋ ಹೋಗ್ಬಿಟ್ಟದೀನಿ ಅಂತ ಅನುಮಾನ ಇವ್ನಿಗೆ, ಅದ್ಕೇ ಫೋನ್ ಮಾಡ್ತಿದಾನೆ' ಎಂದು ಗೊಣಗಿಕೊಂಡು,